ಅನ್ನವನ್ನು ಕಲಸಿ ತಿನ್ನಲು ತೊಡಗಿದರು. ಅತ್ತೆ ನನ್ನ ಪಕ್ಕ ಕಣ್ಣನ್ನು ತೋರಿಸಿದಾಗ, ಯಾರಿಗೂ ಉತ್ತರ ತಿಳಿಯದ ಲೆಕ್ಕವನ್ನು ಅವರಿಗೆ ಹೇಳಿ ಉತ್ತರ ಗೊತ್ತೇ ಎಂದು ಕೇಳಿದೆ. ಒಂದು ಕ್ಷಣ ಅನ್ನ ಕಲಸುವುದನ್ನು ನಿಲ್ಲಿಸಿ, "ನೀನು ಲೆಕ್ಕದಲ್ಲಿ ಹುಲಿಯಲ್ಲವೇ, ಕಂಡು ಹಿಡಿ" ಎಂದರು. ಮತ್ತೆ ಏನನ್ನೋ ಹೇಳಲು ಯತ್ನಿಸಿದಾಗ "ಊಟ ಮಾಡೋವಾಗ ಯಾಕೆ ಗೊಣಗೊಣಾಂತ ಮಾತಾಡ್ತಾನೆ ಇರ್ತೀಯಾ? ಸಮಯಕ್ಕೆ ಸರಿಯಾಗಿ ಊಟಮಾಡಿ ನಿದ್ದೆ ಮಾಡೋದನ್ನ ಕಲಿ, ಹೋಗು" ಎಂದು ಕಟುವಾದ ದನಿಯಲ್ಲಿ ಹೇಳಿದರು.

ತಟ್ಟೆಯಲ್ಲಿಯೇ ಕೈತೊಳೆದು, ತೇಗುತ್ತ ಎದ್ದು ಹೋಗಿ ಹೊಸಿಲಲ್ಲಿ ಇದ್ದ ಹಗ್ಗದ ಮಂಚದಲ್ಲಿ ಕುಳಿತರು ಅವರು. ಅಮ್ಮ ಎದ್ದುಹೋಗಿ ವೀಳ್ಯದ ಚೀಲವನ್ನು ಒಂದು ಚೊಂಬು ನೀರನ್ನು ಅವರ ಪಕ್ಕದಲ್ಲಿಟ್ಟು ಹಿಂತಿರುಗಿದಳು.

ಗುಸುಗುಸು ಎಂದು ತಗ್ಗಿದ ದನಿಯಲ್ಲಿ ಲೆಕ್ಕದ ಉತ್ತರವನ್ನು ಚರ್ಚಿಸುತ್ತ ತಟ್ಟೆಯಲ್ಲಿ ಅನ್ನ ಹಾಕಿ ತಿಂದೆವು. ಸರಿಯಾದ ಉತ್ತರವನ್ನು ಕಂಡುಹಿಡಿಯಲು ಆಗಲೇ ಇಲ್ಲ. ಪಾತ್ರೆಗಳನ್ನು ತೊಳೆದಿಡುವ ಹೊತ್ತಿಗೆ ಕೊಟ್ಟಿಗೆಯ ಹಿಂದೆ ತೊಟ್ಟಿಯವರು ಬಂದು ನಿಂತರು. ಮೆಲ್ಲಗೆ ಗಂಟಲು ಸರಿಮಾಡಿಕೊಳ್ಳುತ್ತ "ಅಮ್ಮ" ಎಂದು ಅವರು ದನಿಕೊಟ್ಟರು. "ಇಲ್ಲಿ ಬೆಳಕಿರೋ ಕಡೆ ಬಂದು ಕುಳಿತುಕೋ" ಎನ್ನುತ್ತ ಅಮ್ಮ ಎದ್ದರು. ಕೊಟ್ಟಿಗೆಗೆ ನೇರವಾಗಿ ಬಂದು ಕುಳಿತಮೇಲೆ ಸೂರಲ್ಲಿ ಸಿಕ್ಕಿಸಿದ್ದ ಒಂದು ಎಲೆಯನ್ನು ತೆಗೆದು ಅವರ ಮುಂದೆ ಬಿಚ್ಚಿಟ್ಟರು. ಬೋಗುಣಿಯಲ್ಲಿದ್ದ ಅನ್ನವನ್ನು ಅದರಲ್ಲಿ ಹರಡಿಟ್ಟಳು. ಅದರ ಮೇಲೆ ಬೆಂಡೇಕಾಯಿ ಹುಳಿಯನ್ನು ಬಡಿಸಿದರು. ಹಲಸಿನಬೀಜದ ಪೊರಿಯಲನ್ನು, ಸುವರ್ಣಗೆಡ್ಡೆ ಪೊರಿಯಲನ್ನು ಅನ್ನದ ಗುಪ್ಪೆಯ ಪಕ್ಕದಲ್ಲಿ ಇಟ್ಟಳು. ಅವರು ಎಲ್ಲವನ್ನೂ ಒಂದಾಗಿ ಕಲಸಿ ತಿಂದರು. ನಾನು ಬಾಗಿಲ ಹಿಂದೆ ನಿಂತಿರುವುದನ್ನು ನೋಡಿ "ಚಿಕ್ಕ ಸ್ವಾಮಿ ಇನ್ನೂ ನಿದ್ದೆ ಮಾಡಿಲ್ವಾ? ಓದೋ ಹುಡುಗ ಇಷ್ಟೊತ್ತು ಎಚ್ಚರವಾಗಿರಬಹುದೇ?" ಎಂದು ನಗುವುದನ್ನು ನನ್ನಿಂದ ನೋಡಲು ಸಾಧ್ಯವಾಯಿತು. "ಏನೋ ಬಾಳೆಕಾಯಿ ಲೆಕ್ಕ ಹೇಳಿದೆಯಂತಲ್ಲ. ಅದಕ್ಕೆ ಉತ್ತರ ಗೊತ್ತಾದರೇನೇ ಅವನಿಗೆ ನಿದ್ದೆ ಬರೋದು" ಎಂದು ನನ್ನ ಪರವಾಗಿ ಅಮ್ಮ ಹೇಳಿದಳು. "ಅಯ್ಯಯ್ಯೋ, ನನಗೆ ಉತ್ತರ ಗೊತ್ತಿಲ್ಲ ಸ್ವಾಮಿ, ಹಳೇ ತೋಟದಲ್ಲಿ ಯಾರೋ ಹೇಳ್ತಾ ಇದ್ದಾಗ ಕೇಳಿಸಿಕೊಂಡದ್ದು ಅಷ್ಟೇ. ಕಲ್ಲಲ್ಲಿ ಕೆತ್ತಿದಂತೆ ಹಾಗೆಯೇ ಎದೆಯಲ್ಲಿ ನಾಟಿಹೋಯಿತು" ಎಂದರು. ಎರಡು ಸಲ ಅನ್ನ ಹಾಕಿಸಿಕೊಂಡು ಊಟಮಾಡಿ, ಎಲೆಯನ್ನು ಸುರುಳಿಸಿ ಎತ್ತಿಕೊಂಡು ಹೋಗಿ ತಿಪ್ಪೆಯಗುಂಡಿಯೊಳಗೆ ಹಾಕಿ ಕೈತೊಳೆದುಕೊಂಡರು.

"ಎಲ್ಲಿ ಮಲಗ್ತೀಯಾ?" ಎಂದು ಅಮ್ಮ ಕೇಳಿದರು.

"ಆ ಮರದಡಿಯಲ್ಲಿ ಮಲಗಿಕೊಳ್ತೇನೆ" ಗೋಡೆಯ ಪಕ್ಕದಲ್ಲಿದ್ದ ಗರಿಗಳ ಕಟ್ಟಿನಿಂದ ನಾಲ್ಕು ಗರಿಗಳನ್ನು ತೆಗೆದುಕೊಂಡು ಹೋಗಿ ಒಂದರ ಮೇಲೆ ಮತ್ತೊಂದನ್ನು ಹಾಸಿ ಅವರು ಬಂದರು.

ಲಾಂದ್ರದ ಬೆಳಕಿನೊಂದಿಗೆ ಹೋದ ಅಮ್ಮ ದನಗಳನ್ನೆಲ್ಲ ಒಮ್ಮೆ ನೋಡಿ ಬಂದು ಮನೆಯೊಳಗೆ ಹೋದರು.

ಎಂದಿನಂತೆ ಅತ್ತೆ ಹೇಳುವ ಕಥೆಗಳಲ್ಲಿ ನನ್ನ ಗಮನವನ್ನು ಹರಿಸಲು ಅಂದು ರಾತ್ರಿ ಆಗಲಿಲ್ಲ. ಮನಸ್ಸು ಪೂರ್ತಿಯಾಗಿ ಆ ಕಲ್ಲಿನ ತೊಟ್ಟಿಯ ಕಲ್ಪನೆಯೇ ತುಂಬಿತ್ತು. "ಏನೋ ಹೂಂ ಗುಟ್ಟದೆ ಕಥೆ ಕೇಳ್ತಾ ಇದ್ದೀಯಾ? ನಿದ್ದೆ ಬಂತೇನೋ?" ಎಂದು ಕೇಳುತ್ತಾ ನನ್ನನ್ನು ಅಲುಗಿಸಿದಳು ಅತ್ತೆ. ಅದರ ನಂತರವೇ ನನಗೆ ಎಚ್ಚರವಾಯಿತು. "ಏನು ಅತ್ತೆ?" ಎಂದೇ "ಏನೂ ಇಲ್ಲ ಮಲಗು" ಎಂದು ಹೇಳಿ ಅವಳು ಕಣ್ಣು ಮುಚ್ಚಿಕೊಂಡಳು.